UASB LIBRARY
Jai Kisan
Newspaper Clippings
Saturday 04-02-2023
Pg. 1

ಕೇರಳ ವಿಜ್ಞಾನಿಗಳ ಹೊಸ ಆವಿಷ್ಕಾರ | ಉತ್ಪಾದನೆ ವೆಚ್ಚವೂ ತೀರಾ ಕಡಿಮೆ

ಮರಗೆಣಸಿನ ಎಲೆಯಿಂದ ಚಲಿಸುವ ಬೈಕ್!

■ **ಅಜಿತ್ ಸ್ವರ್ಗ** ಪೆರ್ಲ(ಮಂಗಳೂರು)
ajithswarga@gmail.com

ಮರಗೆಣಸಿನ ಎಲೆಯಿಂದ ಸಾವಯವ ಕೀಟನಾಶಕ ತಯಾರಿಸಿದ ತಿರುವನಂತಪುರದ ಸೆಂಟ್ರಲ್ ಟ್ಯೂಬರ್ ರಿಸರ್ಚ್ ಸೆಂಟರ್‌ನ ವಿಜ್ಞಾನಿಯೊಬ್ಬರು ಮತ್ತೊಂದು ಆವಿಷ್ಕಾರ ಮಾಡಿದ್ದು, ಮರಗೆಣಸಿನ ಎಲೆಯನ್ನು ಬಳಸಿ ಸಿದ್ಧಪಡಿಸಿದ ನೈಸರ್ಗಿಕ ಅನಿಲದಿಂದ ಬೈಕ್ ಚಲನೆ ಕಂಡುಹಿಡಿದಿದ್ದಾರೆ.

ರಿಸರ್ಚ್ ಸೆಂಟರ್‌ನ ಪ್ರಧಾನ ವಿಜ್ಞಾನಿ ಡಾ. ಸಿ.ಎ. ಜಯಪ್ರಕಾಶ್ ನೇತೃತ್ವದ ತಂಡವು ಮರಗೆಣಸಿನ ಎಲೆಯನ್ನು ಬಳಸಿ ಮೆಥನೋಜೆನೆಸಿಸ್ ಎಂಬ ವೈಜ್ಞಾನಿಕ ಪ್ರಕ್ರಿಯೆ ಮೂಲಕ ನೈಸರ್ಗಿಕ ಅನಿಲ ಉತ್ಪಾದಿಸಲಾಗುತ್ತದೆ. ಕೀಟನಾಶಕದ ಆವಿಷ್ಕಾರದ ಬಳಿಕ ಉಳಿಕೆಯಾಗುವ ತ್ಯಾಜ್ಯದಿಂದ ಶೇ.60 ಮಿಥೇನ್ ಮತ್ತು ಶೇ.40 ಕಾರ್ಬನ್ ಡೈ ಆಕ್ಸೈಡ್ ಉತ್ಪಾದಿಸಲಾಗುತ್ತಿದೆ. ಈ ಮಿಶ್ರಣದಿಂದ ಮಿಥೇನ್ ಹೊರತೆಗೆಯುವ





ಪ್ರಯೋಗಾಲಯದಲ್ಲಿ ಸಿದ್ಧಪಡಿಸಿದ ಒಂದು ಕೆಜಿ ಮಿಥೇನ್ ಬಳಸಿ 28 ಕಿ.ಮೀ. ಬೈಕ್ ಚಲಾಯಿಸಬಹುದು. ಹೆಚ್ಚಿನ ಆವಿಷ್ಕಾರ ನಡೆಸಿದರೆ ಇನ್ನೂ ಹೆಚ್ಚು ಕಿ.ಮೀ. ಸಂಚರಿಸಬಹುದು. ಇದಕ್ಕಾಗಿ ಅನೇಕ ಕಂಪನಿಗಳನ್ನು ಸಂಪರ್ಕಿಸಲಾಗಿದೆ.
-ಡಾ.ಜಯಪ್ರಕಾಶ್ ಪ್ರಧಾನ ವಿಜ್ಞಾನಿ, ತಿರುವನಂತಪುರ ಸೆಂಟ್ರಲ್ ಟ್ಯೂಬರ್ ರಿಸರ್ಚ್ ಸೆಂಟರ್

ಮೂಲಕ ಒಂದು ಟನ್ ಮರಗೆಣಸಿನ ಎಲೆಯ ತ್ಯಾಜ್ಯದಿಂದ 51 ಕೆಜಿ ಮಿಥೇನ್ ಉತ್ಪಾದಿಸಬಹುದು ಎಂದು ಡಾ. ಸಿ.ಎ. ಜಯಪ್ರಕಾಶ್ ತಿಳಿಸಿದ್ದಾರೆ.

ಉತ್ಪಾದನಾ ವೆಚ್ಚ ಕಡಿಮೆ: ''ಸಿಎನ್‌ಜಿ ಉತ್ಪಾದನಾ ವಿಧಾನಗಳ ಬದಲಿಗೆ ಮರಗೆಣಸಿನ ಎಲೆ ಬಳಸಿದರೆ ಉತ್ಪಾದನಾ ವೆಚ್ಚ ತುಂಬಾ ಕಡಿಮೆಯಾಗ ಲಿದೆ,'' ಎಂದು ಡಾ. ಜಯಪ್ರಕಾಶ್ ತಿಳಿಸಿದ್ದಾರೆ.

ಭಾರತದಲ್ಲಿ ಪ್ರಮುಖ ಸಿಎನ್‌ಜಿ ಸ್ಥಾವರದಲ್ಲಿ 400 ಕೆಜಿ ಮಿಥೇನ್ ಉತ್ಪಾದಿಸಲು 8 ಟನ್ ಆಹಾರ ತ್ಯಾಜ್ಯ ಬಳಸಲಾಗುತ್ತಿದೆ. ಆದರೆ 7.8 ಟನ್ ಮರಗೆಣಸು ಎಲೆಯನ್ನು ಬಳಸಿದರೆ ಇಷ್ಟೇ ಪ್ರಮಾಣದ ಮಿಥೇನ್ ಉತ್ಪಾದಿಸಬಹುದು. 1.6 ಹೆಕ್ಟೇರ್ ಮರಗೆಣಸು ಕೃಷಿಯಿದ್ದರೆ ಇಷ್ಟು ಪ್ರಮಾಣದ ಎಲೆ ಸಿಗುತ್ತದೆ. ತ್ಯಾಜ್ಯವನ್ನು ಬಳಸುವ ಕಾರಣ ವೆಚ್ಚವೂ ತುಂಬಾ ಕಡಿಮೆಯಾಗುವುದು.

ಸಿಟಿಸಿಆರ್‌ಐ ನಿರ್ದೇಶಕಿ ಡಾ. ಎಂ.ಎನ್. ಶೀಲಾ, ಡಾ. ಎಲ್.ಎಸ್. ರಾಜೇಶ್ವರಿ, ಎನ್‌ಐಐಎಸ್‌ಟಿ ಪ್ರಧಾನ ವಿಜ್ಞಾನಿ ಡಾ.ಕೃಷ್ಣ ಕುಮಾರ್, ವಿದ್ಯಾರ್ಥಿಗಳಾದ ಶ್ರೀಜಿತ್, ದೃಶ್ಯ, ಜೋಸೆಫ್ ಮತ್ತು ಸಿನ್ನಿ ಮತ್ತು ಸಲಕರಣೆಗಳನ್ನು ಸಿದ್ಧಪಡಿಸಿದ ತ್ರಿಶೂರ್ ನಿವಾಸಿ ಫ್ರಾನ್ಸಿಸ್, ಬಾಬಾ ಆಟೋಮಿಕ್ ರಿಸರ್ಚ್ ಸೆಂಟರ್ ಮುಂಬಯಿ, ಐಐಟಿ ಅಧಿಕಾರಿಗಳ ಸಹಕಾರದಲ್ಲಿ ಯೋಜನೆ ಕಾರ್ಯರೂಪಕ್ಕೆ ಬಂದಿದೆ ಎಂದು ಡಾ. ಸಿ.ಎ. ಜಯಪ್ರಕಾಶ್ ತಿಳಿಸಿದ್ದಾರೆ.

04-02-2023
V-karnataka Pg 05

ಹೊಲಕ್ಕೆ ಬಂದು ವರ್ತಕರಿಂದ ಖರೀದಿ | ಮಂಗಳೂರು, ಬೆಂಗಳೂರು, ಮುಂಬಯಿಗೆ ರವಾನೆ

ಸಿಹಿ ಕುಂಬಳ ಬೆಳೆದ ರೈತನ ಸಿರಿ ವೃದ್ಧಿ!

■ **ಎಸ್.ಎಂ. ಸೋಮನಗೌಡ**
ಜಗಳೂರು
sukesh2365@gmail.com

ವೈವಿಧ್ಯ ಕೃಷಿ ಬೆಳೆಗೆ ಹೆಸರಾದ ಜಗಳೂರು ತಾಲೂಕಿನಲ್ಲಿ ತರಕಾರಿ ಬೆಳೆ ಪ್ರಯೋಗ ಹೆಚ್ಚುತ್ತಿದೆ. ತಾಲೂಕಿನ ಹಿರೇಅರಕೆರೆ ಗ್ರಾಮದ ನಿವೃತ್ತ ಪಿಡಿಒ ಚಂದ್ರಪ್ಪ ಎರಡು ಎಕರೆ ಹೊಲದಲ್ಲಿ ಸಿಹಿ ಕುಂಬಳ ಬೆಳೆದಿದ್ದು 1.50 ಲಕ್ಷ ರೂ. ಆದಾಯದ ನಿರೀಕ್ಷೆಯಲ್ಲಿದ್ದಾರೆ.

ಆರ್ಥಿಕ ಸ್ವಾವಲಂಬನೆಗೆ ಅಲ್ಪವಧಿ ಬೆಳೆಯಾದ ತರಕಾರಿ ಸಹಕಾರಿಯಾಗಿದ್ದು ರೈತರು ಇತ್ತ ವಾಲುತ್ತಿದ್ದಾರೆ. ತರಕಾರಿ ಬೆಳೆಯಲ್ಲಿ ಒಂದಾದ ಕಡಿಮೆ ಖರ್ಚು, ಅಲ್ಪ ನೀರು ಬೇಡುವ ಕುಂಬಳವನ್ನು ಇವರು ಬೆಳೆದಿದ್ದಾರೆ. ಕೊಯ್ಲಿಗೆ ಬಂದಿರುವ ಕುಂಬಳ ಇವರ ಹೊಲದಲ್ಲಿ ಹುಲುಸಾಗಿದೆ.

ತಾಲೂಕಲ್ಲಿ ಮೆಣಸಿನಕಾಯಿ, ಬದನೆ, ಟೊಮೆಟೊದಂತಹ ತರಕಾರಿ ಬೆಳೆಗಳನ್ನು ಕಾಣಬಹುದು. ಇವುಗಳ ಜತೆ ಕುಂಬಳ ವ್ಯಾಪ್ತಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಬೆಂಗಳೂರು, ಮಂಗಳೂರು, ಮುಂಬೈ ಸೇರಿದಂತೆ ಅನೇಕ ಪ್ರದೇಶಗಳಿಗೆ ಇಲ್ಲಿನ ಕುಂಬಳ ರಫ್ತಾಗುತ್ತಿದೆ. ವ್ಯಾಪಾರಿಗಳು ನೇರ ಹೊಲಕ್ಕೆ ಬಂದು ಖರೀದಿ ಮಾಡುತ್ತಿದ್ದಾರೆ. ಸಾರಿಗೆ ವೆಚ್ಚವಿಲ್ಲದೇ ರೈತರ ಜೇಬಿಗೆ ಹಣ ಸೇರುವುದರಿಂದ



ಜಗಳೂರು ತಾಲೂಕಿನ ಹಿರೇಅರಕೆರೆ ಗ್ರಾಮದಲ್ಲಿ ರೈತ ಚಂದ್ರಪ್ಪ ಅವರ ಹೊಲದಲ್ಲಿ ಬೆಳೆದಿರುವ ಹಸಿರು ಕುಂಬಳ ಚಿತ್ರ.



ಸಮಸ್ಯೆ ತೀರಾ ಕಡಿಮೆ ಎನ್ನುತ್ತಾರೆ ಈಗ ಕುಂಬಳ ಬೆಳೆದಿರುವ ರೈತ ಚಂದ್ರಪ್ಪ.

30 ಟನ್ ಇಳುವರಿ ನಿರೀಕ್ಷೆ

ತಮ್ಮ ಎರಡು ಎಕರೆ ಜಮೀನಿನಲ್ಲಿ ಕನಿಷ್ಠ 30 ಟನ್ ಕುಂಬಳಕಾಯಿ ಮಾರಾಟಕ್ಕೆ ಲಭ್ಯವಿದೆ. ಒಂದು ಕುಂಬಳ ಕಾಯಿ ಕನಿಷ್ಠ 8ರಿಂದ 10 ಕೆಜಿ ತೂಗುತ್ತವೆ. ಒಂದು ಬಳ್ಳಿಗೆ ಕನಿಷ್ಠ ನಾಲ್ಕರಿಂದ ಐದು ಕಾಯಿಗಳು ಬಿಟ್ಟಿವೆ. ಎಲ್ಲ ಸೇರಿ 30 ಟನ್ ಉತ್ಪನ್ನ ನಿರೀಕ್ಷೆಯಲ್ಲಿದ್ದು 1.50 ಲಕ್ಷ ಆದಾಯ ನಿರೀಕ್ಷೆಯಲ್ಲಿದ್ದಾರೆ. ಜತೆಗೆ ಹೊಲಕ್ಕೆ ಹಸಿರೆಲೆ ಗೊಬ್ಬರದ ಕೊರತೆಯಿಲ್ಲ, ರೈತ ಚಂದ್ರಪ್ಪ ಎಕರೆಗೆ 15 ಸಾವಿರದಂತೆ ಎರಡು ಎಕರೆಗೆ ಬೀಜ, ಗೊಬ್ಬರ, ಕಳೆ, ಔಷಧಕ್ಕೆ 30 ಸಾವಿರ ಖರ್ಚು ಮಾಡಿದ್ದಾರೆ.

ಬಿತ್ತನೆಗೆ ನಿರ್ದಿಷ್ಟ ಸಮಯವಿಲ್ಲ

ಕುಂಬಳವನ್ನು ಯಾವಾಗ ಬೇಕಾದರೂ ಬಿತ್ತನೆ ಮಾಡಬಹುದು. ವರ್ಷದ ಮಳೆ, ಚಳಿಗಾಲ ಮತ್ತು ಬೇಸಿಗೆಯಲ್ಲೂ ಬಿತ್ತನೆ ಮಾಡಬಹುದು. ಚಳಿಗಾಲದಲ್ಲಿ ಬಿತ್ತನೆ ಮಾಡಿದರೆ ಸ್ವಲ್ಪ ರೋಗ ಬಾಧೆ ಹೆಚ್ಚು. ಬಿತ್ತನೆ ಅವಧಿಯಲ್ಲಿ ಡಿಎಪಿ ಇಲ್ಲ.10-26 ಗೊಬ್ಬರ ಹಾಕಬೇಕು. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಬಿತ್ತನೆ ಮಾಡದೇ ಜನವರಿಯಲ್ಲಿ ಬಿತ್ತನೆ ಮಾಡಿದರೆ ಚಳಿಯಿಂದ ಎಲೆಗಳು ಮುಟುರು ರೋಗ ಬರುವುದಿಲ್ಲ, ಔಷಧೋಪ ಚಾರವೂ ಕಡಿಮೆ. ಎಲೆಗಳಿಗೆ ಮುಟುರು ಅಥವಾ ಬಿಳಿಬಣ್ಣಕ್ಕೆ ಎಲೆ ತಿರುಗಿದರೆ 'ಜಿ5' ಔಷಧ ಸಿಂಪಡಿಸಿದರೆ ಕಡಿಮೆ ಅವಧಿಯಲ್ಲಿ ರೋಗ ತೇಲುತ್ತದೆ, ಕಾಯಿಯ ಗಾತ್ರ ಹೆಚ್ಚುತ್ತದೆ ಎಂದು ಕೃಷಿ ಇಲಾಖೆ ಅಧಿಕಾರಿ ಮಿಥುನ್ ಕಿಮಾವತ್ ಹೇಳುತ್ತಾರೆ.

ರೈತರು ಒಂದೇ ಬೆಳೆಗೆ ಸೀಮಿತ ವಾಗದೇ ತರಕಾರಿ ಬೆಳೆಗಳ ಲ್ಲಿಯೂ ವೈವಿಧ್ಯಮಯ ಬೆಳೆಗಳ ಬೆಳೆಯಬೇಕು. ಹೊಲವೇ ಮಾರುಕಟ್ಟೆ ಆದರೆ ವರ್ತಕ, ರೈತ ಇಬ್ಬರಿಗೂ ಅನುಕೂಲ. ಈಗ ಕುಂಬಳಕ್ಕೆ ಮಾರುಕಟ್ಟೆ ಯಲ್ಲಿ ಕೆಜಿಗೆ 6 ರೂ. ಬೆಲೆಯಿದೆ, ವರ್ತಕರು ಹೊಲಕ್ಕೆ ಬಂದು ಖರೀದಿಸು ವುದರಿಂದ 4 ರೂ.ಗೆ ಕೇಳುತ್ತಿದ್ದಾರೆ.
-ಚಂದ್ರಪ್ಪ ಜಗಳೂರು ರೈತ

04-02-2023
V-karnataka Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

ರಿಯಾಯಿತಿ ದರದಲ್ಲಿ ಔಷಧ ವಿತರಿಸುವಂತೆ ರೈತರ ಆಗ್ರಹ

ಮಾವಿನ ಮರಗಳಿಗೆ ಜಿಗಿಹುಳು ಕಾಟ

ದೇವನಹಳ್ಳಿ: ರೈತರ ಜೀವನಾಡಿಯಾಗಿರುವ ಮಾವಿನ ಮರಗಳಿಗೆ ಜಿಗಿಹುಳು ಕಾಟ ಹೆಚ್ಚಾಗುತ್ತಿದ್ದು, ತೋಟಗಾರಿಕೆ ಇಲಾಖೆಯಿಂದ ಜಿಗಿಹುಳು ಹತೋಟಿಗೆ ರಿಯಾಯಿತಿ ದರದಲ್ಲಿ ಔಷಧ ವಿತರಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಮಾವಿನಮರಗಳಲ್ಲಿಸಂಪೂರ್ಣವಾಗಿಹೂಬಿಟ್ಟು ಪಿಂದೆ ಕಟ್ಟುವ ತನಕಕ್ಕೆ ಮಾವು ಬಂದಿದೆ. ಈಗಾಗಲೇ ಮಾವಿನ ಮರಗಳಿಗೆ ಜಿಗಿಹುಳು ಕಾಟದಿಂದ ರೈತರು ಆತಂಕಪಡುವಂತೆ ಆಗಿದೆ. ಬಯಲುಸೀಮೆಯ ಜಿಲ್ಲೆಯಾಗಿರುವುದರಿಂದ ಇರುವ ಭೂಮಿಗಳಲ್ಲಿ ಮಾವು ಬೆಳೆಯನ್ನು ಬೆಳೆಯುತ್ತಾ ಬಂದಿರುತ್ತಾರೆ. ನವೆಂಬರ್, ಅಕ್ಟೋಬರ್‌ನಲ್ಲಿ ಬಿದ್ದ ಮಳೆಯಿಂದಾಗಿ ತೇವಾಂಶ ಹೆಚ್ಚಿರುವುದರಿಂದ ಹೂವುಗಳು ತಡವಾಗಿ ಕಾಣಿಸಿಕೊಂಡಿರುತ್ತದೆ. ರೈತರು ತೋಟಗಾರಿಕಾ ಬೆಳೆಗಳ ಮೇಲೆ ಅವಲಂಬಿತರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಗಳು ಜಿಲ್ಲೆಯಲ್ಲಿ ಹೆಚ್ಚಾಗುತ್ತಿದ್ದು, ಫಲವತ್ತಾದ ಭೂಮಿಗಳು ಭೂಸ್ವಾಧೀನಕ್ಕೆ ಒಳಪಡುತ್ತಿವೆ ಎಂದು ರೈತರು ಹೇಳುತ್ತಾರೆ.

ಹೂವಿನ ಜೊತೆಯಲ್ಲಿ ಚಿಗುರು ಬಂದಿರುವುದರಿಂದ ಮರದ ಸಾರವನ್ನು ಚಿಗುರೇ ಹೆಚ್ಚಾಗಿ ಬಳಸಿಕೊಳ್ಳುವುದರಿಂದ ಹೂವಿಗೆ ಪಿಂದೆ ಹಿಡಿಯುವಷ್ಟು ಶಕ್ತಿ ಕಡಿಮೆಯಾಗಿ ಹೂವು ಉದುರುತ್ತದೆ. ಜೊತೆಗೆ ಚಿಗುರಿನಲ್ಲಿ ಜಿಗಿಹುಳ ಕಾಟವು ಹೆಚ್ಚಾಗಿ ಫಸಲು ಕಡಿಮೆಯಾಗಲಿದೆ ಎಂಬ ಆತಂಕ ರೈತರನ್ನು ಕಾಡುತ್ತಿದೆ ಎಂದು ರೈತರು ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ. ಕಳೆದ ವರ್ಷ ಮಾವಿನ ಫಸಲು ಇಲ್ಲದೆ ನಷ್ಟ ಅನುಭವಿಸಿದ್ದ ರೈತರು, ಈ ಬಾರಿ ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದಾರೆ. ಆದರೆ, ಆರಂಭದಲ್ಲಿ ಎಲ್ಲಾ ಮರಗಳಲ್ಲಿ ಹೂವು ಬರಲು ಆರಂಭಗೊಂಡಾಗ ಉತ್ತಮ ಫಸಲು ಬರುತ್ತದೆ ಎಂದು ರೈತರ ಯೋಚನೆಯಾಗಿತ್ತು. ಆದರೆ, ಹೂವಿನ ಜೊತೆಗೆ ಚಿಗುರು ಬರುತ್ತಿರುವುದರಿಂದ ಬಂದ ಹೂವಿನಲ್ಲಿ ಪಿಂದೆ ಕಚ್ಚುತ್ತದೆಯೇ ಎಂಬುದು ರೈತರ ಆತಂಕವಾಗಿದೆ.

ಮಾವಿನ ಮರಗಳಲ್ಲಿ ಹೂವು ಸಂಮೃದ್ಧಿಯಾಗಿ ಬಿಟ್ಟಿರುವ ಕಾರಣ, ಈ ಬಾರಿ ಉತ್ತಮ ಫಸಲು ಬರುವ ನಿರೀಕ್ಷೆ ರೈತರಲ್ಲಿದೆ. ಆದರೆ, ಮಾವಿನ ಮರಗಳಲ್ಲಿ ಹೂವಿನ ಜೊತೆಯಲ್ಲಿ ಚಿಗುರು ಬರುತ್ತಿರುವ ಕಾರಣ ಮರಗಳಲ್ಲಿ ಜಿಗಿಹುಳ ಕಾಟ ಹೆಚ್ಚಾಗುತ್ತಿದ್ದು ಜಿಗಿ ಹುಳುಗಳ ಹತೋಟಿಗೆ ರಿಯಾಯಿತಿ ದರದಲ್ಲಿ ತೋಟಗಾರಿಕೆ ಇಲಾಖೆಯಿಂದ ಔಷಧ ವಿತರಿಸಬೇಕು ಎಂದು ರೈತರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.



ರೋಗದಿಂದ ಆತಂಕ

ಮಾವಿನ ಮರಗಳಿಗೆ ಜಿಗಿಹುಳು ಕಾಟದಿಂದ ಆತಂಕ ಮನೆಮಾಡಿದೆ. ಮಾವಿನ ಮರಗಳಲ್ಲಿ ಹೆಚ್ಚಾಗಿ ರೋಗಗಳು ಕಾಣಿಸಿಕೊಳ್ಳುತ್ತಿವೆ. ರೈತರ ಬದುಕನ್ನು ಹಾಳು ಮಾಡುತ್ತಿದೆ. ತೋಟಗಾರಿಕೆ ಇಲಾಖೆಯವರು ರೈತರಿಗೆ ರಿಯಾಯಿತಿ ದರದಲ್ಲಿ ಔಷಧಿ ಒದಗಿಸುವುದು ಉತ್ತಮವಾಗಿದೆ. ತೋಟಗಾರಿಕೆ ಬೆಳೆಗಳನ್ನು ನಂಬಿ ಜೀವನ ಸಾಗಿಸುತ್ತಿದ್ದೇವೆ ಎಂದು ರೈತ ಹರೀಶ್ ಹೇಳಿದ್ದಾರೆ.

ಸೂಕ್ತ ಪ್ರಮಾಣದಲ್ಲಿ ಔಷಧ ಸಿಂಪಡನೆ

ಜಿಗಿಹುಳು ಕಾಟವನ್ನು ನಿಯಂತ್ರಿಸಲು ಔಷಧಿಗಳನ್ನು ಸಿಂಪಡಿಸಬೇಕು. ಬೇವಿನ ಎಣ್ಣೆ 10 ಸಾವಿರ ಪಿಪಿಎಂ.2 ಎಂ.ಎಲ್ .1 ಲೀಟರ್‌ಗೆ ವೆಟೆಬಲ್ ಸಲರ್ 2 ಗ್ರಾಂ 1 ಲೀಟರ್ ಇವರೆಡೂ ಮಿಶ್ರಣ ಮಾಡಿ ಸಿಂಪಡಣೆ ಮಾಡಬೇಕು. 15 ದಿನ ಬಿಟ್ಟು, ಅರ್ಧ ಎಂ.ಎಲ್. ಇಮಿಡಾಕ್ಲೋಪ್ರಿಡ್, ಕಾಂಟಪ್ 1 ಎಂ.ಎಲ್. ಮಿಶ್ರಣ ಮಾಡಿ ಸಿಂಪಡಣೆ ಮಾಡಬಹುದು. ಹೆಸರಘಟ್ಟದ ಮ್ಯಾಂಗೋ ಸ್ಪೆಷಲ್ 1 ಲೀಟರ್‌ಗೆ 5 ಗ್ರಾಂ ಮಿಶ್ರಣ ಮಾಡಿ, 25 ಲೀಟರ್‌ಗೆ ಒಂದು ಪಾಕೇಟ್ ಶಾಂಪೂ, 1 ನಿಂಬೆಹಣ್ಣು ಮಿಶ್ರಣ ಮಾಡಿ ಸಿಂಪಡಣೆ ಮಾಡಬಹುದು. ತಾಲೂಕಿನಲ್ಲಿ 650 ಹೆಕ್ಟೇರ್‌ನಲ್ಲಿ ರೈತರು ಮಾವು ಬೆಳೆಯುತ್ತಿದ್ದಾರೆ. ಸಹಜವಾಗಿ ಈ ವಾತಾವರಣದಲ್ಲಿ ಜಿಗಿಹುಳು ಕಾಣಿಸಿಕೊಳ್ಳುತ್ತದೆ. ಇದರ ಜೊತೆಗೆ ಬೂದಿರೋಗವೂ ಕೂಡಾ ಕಾಣಿಸಿಕೊಳ್ಳುತ್ತದೆ ಎಂದು ತಾಲೂಕು ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕಿ ಮಂಜುಳಾ ತಿಳಿಸಿದ್ದಾರೆ.

04-02-2023
Hosadiganta Pg 08